ಓಎಸ್ ನಂ.511/2016
**ಪಿಡಬ್ಲ್ಯೂ-1**

ಸಾಕ್ಷಿಯನ್ನು ದಿಃ**13.03.2023.** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿ.ಜಿ. ವಕೀಲರಿಂದ.

ಈ ದಾವೆಯ ವಾದಿಯ ಗಂಡ ನನ್ನ ಅಣ್ಣ. ನನ್ನನ್ನು ಬೆಂಗಳೂರಿಗೆ ಕೊಟ್ಟು ಮದುವೆ ಮಾಡಲಾಯಿತು. ನನ್ನ ಮದುವೆ ಆಗಿ 40 ವರ್ಷ ಆಯಿತು. 40 ವರ್ಷಗಳಿಂದ ನಾವು ಬೆಂಗಳೂರಿನಲ್ಲಿ ವಾಸವಾಗಿದ್ದೇವೆ ಎಂದರೆ ಸರಿ, ಆದರೆ ನಮ್ಮ ಸ್ವಂತ ಊರಿಗೆ ಬಂದು ಹೋಗಿ ಮಾಡುತ್ತಿದ್ದೇವು. ವಾದಿಯು ಊರಿನಲ್ಲಿರುವ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಇದ್ದರು ಎಂದರೆ ಸರಿ, ಈಗ ಅವರು ಅನಾರೋಗ್ಯದಿಂದ ಮಾಡುತ್ತಿಲ್ಲ. ಈಗ ವಾದಿಯು ಚಟುವಟಿಕೆಯಿಂದ ಇದ್ದಾರೆ ಎಂದರೆ ಸರಿಯಲ್ಲ. ವಾದಿಯು ಆರೋಗ್ಯವಾಗಿದ್ದರೂ ಸಹ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಅವರ ಪರವಾಗಿ ಬಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ದಾವಾ ಆಸ್ತಿಗೆ ಪ್ರತಿವಾದಿ 1 ರವರು ತೊಂದರೆ ಕೊಡುತ್ತಿದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಗೆ 1 ನೇ ಪ್ರತಿವಾದಿ ತೊಂದರೆ ನೀಡುತ್ತಿದ್ದಾರೆ ಎಂಬುದಕ್ಕೆ ಸಂಬಂಧಿಸಿದಂತೆ ಹುಲಿಯೂರುದುರ್ಗ ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ, ಆದರೆ ಪೋಲಿಸನವರು ದೂರು ತೆಗೆದುಕೊಂಡಿರುವುದಿಲ್ಲ. ಆ ಸಂಬಂಧವಾಗಿ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ನಿವೇಶನ ಸಂಖ್ಯೆಃ 10, ಅದರ ವಿಸ್ತೀರ್ಣ 45X20 ಇರುತ್ತದೆ. ಅದರ ಚೆಕ್ಕುಬಂದಿ ಹೇಳಬಲ್ಲೆ ಪೂರ್ವಕ್ಕೇದಾಸಪ್ಪ  ಪಶ್ಚಿಮಕ್ಕೇಃ ಕದಲಯ್ಯ, ಉತ್ತರಕ್ಕೇಃ ದಾಸೇಗೌಡ, ದಕ್ಷಿಣಕ್ಕೇಃ ನಿಂಗಯ್ಯರವರ ಮನೆಗಳು ಇವೆ. ಸದರಿ ದಾವಾ ಆಸ್ತಿಯು ವಾದಿಯ ಹೆಸರಿಗೆ ಬರುವ ಮೊದಲು ದಾಸೇಗೌಡರ ಹೆಸರಿನಲ್ಲಿ ಇತ್ತು. ಸದರಿ ದಾಸೇಗೌಡನವರು ನಮ್ಮ ಊರಿನವರೇ ಆಗಿರುತ್ತಾರೆ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾಸೇಗೌಡರವರ ಹೆಸರಿನಲ್ಲಿ ಇದ್ದ ದಾಖಲೆಗಳನ್ನು ನಾನು ನೋಡಿರುತ್ತೇನೆ.

ದಾಸೇಗೌಡರವರ ಹೆಸರಿನಲ್ಲಿದ್ದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇವೆ. ದಾಸೇಗೌಡರವರ ಹೆಸರಿನಲ್ಲಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆರುವುದಾಗಿ ಹೇಳಲಾದ ಕಾಲಕ್ಕೆ ದಾಸೇಗೌಡರವರ ಹೆಸರಿನಲ್ಲಿ ಯಾವುದೇ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಕ್ರಯಕ್ಕೆ ಪಡೆದುಕೊಳ್ಳುವ ಕಾಲಕ್ಕೆ ದಾಸೇಗೌಡರವರ ಹೆಸರಿನಲ್ಲಿ ಖಾತೆ ನಂಬರ 10 ಅಸ್ತಿತ್ವದಲ್ಲಿ ಇತ್ತು ಎಂಬುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ, ಆ ರೀತಿಯ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಕ್ರಯಕ್ಕೆ ಪಡೆದ ಕಾಲಕ್ಕೆ ದಾಸೇಗೌಡರವರ ಹೆಸರಿಗೆ ಯಾವುದೇ ದಾಖಲೆಗಳು ಇಲ್ಲದೇ ಇರುವ ಕಾರಣ ವಾದಿಯು ಕ್ರಯಕ್ಕೆ ಪಡೆದಿರುವ ಕ್ರಯ ಪತ್ರವೂ ಊರ್ಜಿತವಾಗುವುದಿಲ್ಲ ಎಂದರರೆ ಸರಿಯಲ್ಲ ದಾವಾ ಆಸ್ತಿಯು ನಾನು ಹಾಜರುಪಡಿಸಿರುವ ಕ್ರಯ ಪತ್ರದ ಚೆಕ್ಕುಬಂದಿಯಲ್ಲಿರುವ ಆಸ್ತಿಯೇ ಆಗಿರುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ಬೇರೆ ದಾಖಲೆಯನ್ನು ಹಾಜುರಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇವೆ. ಸದರಿ ಕ್ರಯ ಪತ್ರವನ್ನು ಹೊರತುಪಡಿಸಿ ಬೇರೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 3 ಭಾವಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ಹಳದಿ ಬಣ್ಣದಿಂದ ಕಂಡುಬರುವ ಕಟ್ಟಡ ನಮಗೆ ಸೇರಿದ ಕಟ್ಟಡವಾಗಿರುತ್ತದೆ. ಮತ್ತು ಮಧ್ಯದಲ್ಲಿರುವ ಕಂಡು ಬರುವ ಖಾಲಿ ಜಾಗವು ನಮಗೆ ಸೇರಿದ ಜಾಗವಾಗಿರುತ್ತದೆ. ಸದರಿ ಖಾಲಿ ಜಾಗದ ಹಿಂದೆ ಕಾಣುವಂತಹ ಮನೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಹಿಂದೆ ಕಾಣುವಂತಹ ಮನೆ ಚಿತ್ರವೂ 1 ನೇ ಪ್ರತಿವಾದಿಗೆ ಸೇರಿದ ಮನೆ ಆಗಿರುತ್ತದೆ. ಸದರಿ ಭಾವಚಿತ್ರಗಳಲ್ಲಿ ಕಂಡು ಬರುವ ಹಳೆಯ ಮನೆಯೂ ನಿಂಗಯ್ಯರವರಿಗೆ ಸೇರಿದ ಮನೆ ಆಗಿರುತ್ತದೆ. ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ**-1** ರಿಂದ ನಿಡಿ**-4** ಎಂದು ಗುರುತಿಸಲಾಯಿತು. ನಿಡಿ-4 ರಲ್ಲಿ ಕಂಡುಬರುವ ಸಿಮೆಂಟ್ ಇಟ್ಟಿಗೆ ಅರ್ಧ ಗೋಡೆಯ ಪೂರ್ವ ದಿಕ್ಕಿಗೆ ರಸ್ತೆ ಇದೆ ಎಂದರೆ ಸರಿ. ಅದು ನಮ್ಮ ಮನೆಯ ಮುಂದೆ ಇದೆ. ನಿಂಗಯ್ಯರವರ ಮನೆಯಿಂದ ನಮ್ಮ ಮನೆಯು 4 ರಿಂದ 5 ಅಡಿ ಅಂತರ

ಇರಬಹುದು. ಸಾಕ್ಷಿ ಮುಂದುವರೆದು ಅದು ನಾವೇ ಬಿಟ್ಟುಕೊಂಡಿರುವ ಜಾಗ ಎಂದು ನುಡಿಯುತ್ತಾರೆ. ಸದರಿ ಜಾಗವು ಪಂಚಾಯಿತಿ ಜಾಗ ಎಂದರೆ ಸರಿಯಲ್ಲ. ನನಗೆ ಒಂದು ದಾಖಲೆಯನ್ನು ನ್ಯಾಯಾಲಯದಲ್ಲಿ ತೋರಿಸಲಾಗಿ ಅದು ಎಸ್.ಟಿ. ದಾಸೇಗೌಡರವರ ಹೆಸರಿನಲ್ಲಿ ಇರುವ ದಾಖಲೆ ಎಂಬುದಾಗಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-**5** ಎಂದು ಗುರುತಿಸಲಾಯಿತು. ಸದರಿ ನಿಡಿ-**5** ರ ದಾಖಲೆಯ ಚೆಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಗಲ್ಲಿ ಮತ್ತು ನಿಂಗಯ್ಯ ಎಂಬುದಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ವಾದಿಯು ಬರೆಸಿಕೊಂಡಿರುವ ಚೆಕ್ಕುಬಂದಿ ಯಲ್ಲಿ ಪೂರ್ವ ಪಶ್ಚಿಮ ಮತ್ತು ದಕ್ಷಿಣದಲ್ಲಿ ಚೆಕ್ಕುಬಂದಿಯನ್ನು ತಪ್ಪಾಗಿ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ದಿಃ 28.10.2016 ರಂದು ಖಾತೆ ನಂಬರ 10 ರ ಸ್ಥಳ ಪರೀಶಿಲನೆಗಾಗಿ ಬಂದಿದ್ದರು ಎಂದರೆ ಸರಿ, ಆದರೆ ಸ್ಥಳ ಪರೀಶಿಲನೆ ಮಾಡಿರುವುದಿಲ್ಲ. ಆ ಕಾಲಕ್ಕೆ ಗ್ರಾಮಸ್ಥರು ಸುಮಾರು 50 ಜನ ಇದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಅವರು ಸ್ಥಳ ಪರೀಶಿಲನೆ ಮಾಡಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ 1 ನೇ ಪ್ರತಿವಾದಿ ಮನೆ, ಉತ್ತರಕ್ಕೆ ದಾಸಪ್ಪನವರ ಮನೆ, ದಕ್ಷಿಣಕ್ಕೆ 6 ಅಡಿ ಗಲ್ಲಿ ಮತ್ತು ನಂತರ ನಿಂಗಯ್ಯನವರ ಮನೆ ಎಂದು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಮಗೆ ಸೇರಿದ ಜಾಗ ಮತ್ತು ನಿಂಗಯ್ಯನವರ ಮನೆಯ ಮಧ್ಯೆ ಇರುವ ಗಲ್ಲಿ ಪಂಚಾಯಿತಿಯ ಸ್ವತ್ತಾಗಿರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿ. ನಿಂಗಯ್ಯನವರ ಮನೆಯ ಖಾತೆ ನಂಬರ ನನಗೆ ಗೊತ್ತಿಲ್ಲ. ಅವರ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ನಿಂಗಯ್ಯನವರ ಮನೆಯ ವಿಸ್ತೀರ್ಣ ಪೂರ್ವ ಪಶ್ಚಿಮಃ 31 ಅಡಿ, ಉತ್ತರ- ದಕ್ಷಿಣ 20 ಅಡಿ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಮನೆಯ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಗಲ್ಲಿ ಮತ್ತು ಗಂಗಯ್ಯ, ಉತ್ತರಕ್ಕೆ 6 ಅಡಿ ಗಲ್ಲಿ, ದಾಸೇಗೌಡರವರ ಮನೆ, ದಕ್ಷಿಣಕ್ಕೆ ರಾಮಯ್ಯನವರ ಮನೆ ಇದೆ ಎಂಬುದಾಗಿ ಇದೆ ಎಂದರೆ ಸರಿ. ಸದರಿ ನಿಂಗಯ್ಯನವರ ಮನೆ ಮತ್ತು ನಮ್ಮ ಮನೆಯ ನಡುವೆ ಪೂರ್ವ ಪಶ್ಚಿಮಃ 40 ಅಡಿ, ಉತ್ತರ -ದಕ್ಷಿಣ 6 ಅಡಿ ಗಲ್ಲಿ ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್